ನಡೆಯುತ್ತಿತ್ತು. ಆ ಯುದ್ಧದಲ್ಲಿ ಭಾಗವಹಿಸಲು ನಿಕ್ ಅಂಕಲ್‌ರೂ ಹೋಗಿದ್ದರು. ಅವರು ವಾಪಸ್ ಬಂದಾಗ ಮಿಸ್ಟರ್ ಮತ್ತು ಮಿಸೆಸ್ ಬ್ರೌನ್ ಮರಳಿ ಇಂಗ್ಲೆಂಡಿಗೆ ಹೋಗುವ ತಯಾರಿಯಲ್ಲಿದ್ದರು. ನಿಕ್ ಅಂಕಲ್ ತಮ್ಮ ಸಂಸಾರದೊಂದಿಗೆ ರೆಚೆಲ್ ಕಾಟೆಜ್‌ನಲ್ಲಿಯೇ ಇರತೊಡಗಿದರು.

ನಿಕ್ ಅಂಕಲ್ ದ್ವಿತೀಯ ಮಹಾಯುದ್ಧದಿಂದ ಮರಳಿ ಬಂದಂದಿನಿಂದ ಅವರ ಸ್ವಭಾವದಲ್ಲಿ ಸ್ವಲ್ಪ ಬದಲಾವಣೆಯಾಗಿತ್ತು. ಯುದ್ಧದಿಂದ ಮರಳಿ ಬಂದವರೊಂದಿಗೆ ಆಗಾಗ್ಗೆ ತಡರಾತ್ರಿಯವರೆಗೆ ಪಾನಗೋಷ್ಠಿ ಮಾಡಿ ಗದ್ದಲ ಎಬ್ಬಿಸುತ್ತಿದ್ದರು. ರಿಚಿ ಆಂಟಿಗೆ ಇದು ಸೇರುತ್ತಿರಲಿಲ್ಲ. ಮಕ್ಕಳೂ ಮಲಗುತ್ತಿರಲಿಲ್ಲ. ಆಗ ಸುಷಮಾಳ ತಾಯಿಗೆ ರಿಚಿ ಆಂಟಿ ಮತ್ತು ಅವಳ ಮಕ್ಕಳ ಬಗ್ಗೆ ಕಾಳಜಿ ಸಹಾನುಭೂತಿ ಉಂಟಾಗುತ್ತಿತ್ತು.

ಸುಷಮಾಳ ಮನಸ್ಸಿನಲ್ಲಿ ಚಿಕ್ಕಂದಿನಿಂದ ರಿಚಿ ಆಂಟಿಯ ಬಗೆಗಿರುವ ಚಿತ್ರ ಅದೆಂದೂ ಮಾಸಲಿಲ್ಲ. ಆದರೆ ನಿಕ್ ಅಂಕಲ್‌ನ ಚಿತ್ರ ಮಾತ್ರ ದಿನದಿನಕ್ಕೆ ಬದಲಾಗ ತೊಡಗಿತ್ತು. ಅದೇ ಸಮಯ ಸುಷಮಾ ತನ್ನ ತಂದೆತಾಯಿಯೊಂದಿಗೆ ಬೆಂಗಳೂರು ಬಿಟ್ಟಿದ್ದಳು.

ಸುಷಮಾ ಕಾಲೇಜಿನ ಎರಡನೆಯ ವರ್ಷದಲ್ಲಿ ಓದುತ್ತಿದ್ದಾಗ ತನ್ನ ನಿಯತ್ತಿನ ನಡತೆಯಿಂದ ರಿಚಿ ಆಂಟಿ ತನ್ನ ಪತಿಯನ್ನು ಬಹಳ ದಿನ ತನ್ನ ಪ್ರೇಮಪಾಶದಲ್ಲಿ ನಿಕ್ ಅಂಕಲ್‌ನನ್ನು ಕಟ್ಟಿ ಹಾಕಲು ಸಾಧ್ಯವಾಗಲಿಲ್ಲವೆಂದು ತಿಳಿಯಿತು. ನಿಕ್ ಅಂಕಲ್ ತಮ್ಮ ಆಯಾ ಮಾರ್ಗರೆಟ್‌ಳೊಂದಿಗೆ ಅನೈತಿಕ ಸಂಬಂಧ ಬೆಳೆಸಿದ್ದರು. ಒಂದು ದಿನ ಅವರಿಬ್ಬರ ಪ್ರೇಮಪ್ರಕರಣ ಕಣ್ಣಾರೆ ನೋಡಿದ ರಿಚಿ ಆಂಟಿ ಅಂದಿನಿಂದ ಉದಾಸೀನದಿಂದಿರತೊಡಗಿದಳು. ಅವಳ ಹೂವಿನಂತಹ ಮುಖ ಬಾಡತೊಡಗಿತು. ಕೆಲವು ದಿನಗಳ ನಂತರ ಗೊತ್ತಾಯಿತು, ರಿಚಿ ಆಂಟಿಯ ತಂದೆತಾಯಿ ಒಂದು ಕಾರ್ ಆ್ಯಕ್ಸಿಡೆಂಟಿನಲ್ಲಿ ಮೃತ್ಯುವಶರಾದರು. ಈ ನಿಷ್ಠುರ ಜಗತ್ತಿನಲ್ಲಿ ರಿಚಿ ಅಂಟಿ ಒಬ್ಬಂಟಿಗಳಾದಳು ಎಂದು ಸುಷಮಾಗೆ ಅನಿಸಿತು.

ಕೆಲವು ವರ್ಷಗಳ ನಂತರ ಸುಷಮಾಳಿಗೆ ಕೆಲವು ದಿನಗಳಿಗಾಗಿ ತಾಯಿಯ ಬಳಿ ಇರಬೇಕಾಯಿತು. ತಾಯಿಯ ಆರೋಗ್ಯ ಬಿಗಡಾಯಿಸಿತ್ತು. ಅವರನ್ನು ನೋಡಿಕೊಳ್ಳಲು ಸುಷಮಾ ಇರಬೇಕಾಯಿತು. ಒಂದು ದಿನ ಮಾತಾಡುವಾಗ ತಾಯಿ ನಿಕ್ ಅಂಕಲ್‌ನ ಸಾವಿನ ಸುದ್ದಿ ಹೇಳಿದಳು. ತುಂಬ ಸರಾಯಿ ಕುಡಿದು ಕೇವಲ ನಲವತ್ತೈದು ವರ್ಷ ಪ್ರಾಯದಲ್ಲಿ ಲಿವರ್ ಹಾಳಾಗಿ ಸತ್ತು ಹೋಗಿದ್ದ. ನಿಕ್ ಅಂಕಲ್ ಸಾಯುವ ಮುನ್ನ ಮನೆಯ ಆಯಾಳ ಸಹವಾಸದಲ್ಲಿ ಬಿದ್ದು, ಹಗಲು ರಾತ್ರಿ ಹೆಂಡ ಕುಡಿದು ತನ್ನ ಆಸ್ತಿಪಾಸ್ತಿ, ಬ್ಯಾಂಕಿನಲ್ಲಿಟ್ಟ ಹಣವಲ್ಲದೆ, ರಿಚಿ ಆಂಟಿಯ ತಂದೆತಾಯಿ ಭಾರತ ಬಿಡುವ ಮೊದಲು ಕೊಟ್ಟು ಹೋದ ಚಿನ್ನದ ಆಭರಣಗಳೆಲ್ಲ ಕರಗಿ ಹೋಗಿದ್ದವು. ಇಂಗ್ಲೆಂಡಿನಲ್ಲಿಯೂ ಏನೂ ಉಳಿದಿರಲಿಲ್ಲ. ಉಳಿದಿರುವುದು ರೆಚೆಲ್ ಕಾಟೆಜ್ ಮತ್ತು ಅದಕ್ಕೆ ಹೊಂದಿಕೊಂಡಿರುವ ಸ್ವಲ್ಪ ಜಮೀನು ಮಾತ್ರ. ಇಂಥ ಬಡತನ ಮತ್ತು ದುಃಖದ ದಿನಗಳು ಬರಬಹುದೆಂದು ಅವಳು ಕನಸಿನಲ್ಲೂ ಎಣಿಸಿರಲಿಲ್ಲ. ಸ್ನೇಹ, ಪ್ರೀತಿ, ಮುದ್ದಿನಿಂದ ಬೆಳೆದ ರಿಚಿ ಆಂಟಿ ಬಡತನದಿಂದ ಕಂಗಾಲಾಗಿದ್ದಳು. ಅವಳು ಹತ್ತಿರದ ಕಾನ್ವೆಂಟ್ ಸ್ಕೂಲಿನಲ್ಲಿ ಸಂಗೀತ, ಪಿಯಾನೊ ಕಲಿಸಿ, ಚರ್ಚಿನಲ್ಲಿ ಹಾಡಿ ಬರುವ ಅಲ್ಪಸ್ವಲ್ಪ ಸಂಪಾದನೆಯಲ್ಲಿ ದಿನ ದೂಡಬೇಕಾಯಿತು.

ಮಗಳು ರಾಜಿ ಬಹಳ ಶ್ರಮಪಟ್ಟು ತನ್ನ ಶಿಕ್ಷಣ ಮುಗಿಸಿದಳು. ಅವಳು ಜಾಣೆ. ಪ್ರತಿಯೊಂದು ಪರೀಕ್ಷೆಯಲ್ಲಿಯೂ ಹೆಚ್ಚಿನ ಅಂಕ ಪಡೆದು ಪಾಸಾಗುತ್ತಿದ್ದಳು. ಅವಳು ಸ್ಕಾಲರ್‌ಶಿಪ್ ಪಡೆದು ಓದಲು ವಿದೇಶಕ್ಕೆ ಹೋಗಿ ಅಲ್ಲಿಯೆ ಒಬ್ಬ ಹುಡುಗನ ಪ್ರೇಮಪಾಶದಲ್ಲಿ ಬಿದ್ದು ಮದುವೆಯಾದಳು. ಮಗ ಮಾರ್ಕ್ ತಂದೆಯಂತಾಗಿದ್ದ. ಅವನಿಗೆ ಮೋಜು ಮಜದಲ್ಲಿ ಆಸಕ್ತಿ ಜಾಸ್ತಿ. ರಿಚಿ ಆಂಟಿಯ ಕೊನೆಯ ದಿನಗಳು ಕಷ್ಟಮಯವಾಗಿದ್ದವು. ರಿಚಿ ಆಂಟಿ ಗತಿಸಿದ ಮೇಲೆ ಮಾರ್ಕನಿಗೆ ಹೇಳುವವರು